# ಲವ್ ಸ್ಟೋರಿ

## ರಮ್ಯ ಪ್ರೀತಿ, ವಿಜ್ಞಾನ ಮತ್ತು ಪ್ರಕೃತಿ

ಮನುಷ್ಯಸಂಕುಲವನ್ನು ಆವರಿಸಿಕೊಂಡಿರುವ ಪ್ರೇಮದ ಪರಿಭಾಷೆಗಳು ಭಿನ್ನವಾಗಿ ಇರಬಹುದಾದರೂ, ಪ್ರೇಮವೆನ್ನುವ ಅಂತರ್ಜಲದ ಪರಿಣಾಮ ಮತ್ತು ಪ್ರೇರಣೆ ಒಂದೇ. ರಮ್ಯ ರೂಪದಲ್ಲಿ ನೋಡಬಹುದಾದ ಪ್ರೇಮ ಮನುಷ್ಯರನ್ನು ಪೊರೆಯುತ್ತದೆ, ಜಗತ್ತನ್ನು ಪ್ರೇಮಸೂತ್ರದಡಿ ನಡೆಸುತ್ತದೆ. ಇಂಥ ಮಾಂತ್ರಿಕ ಪ್ರೇಮ ಭಾವನಾಜಗತ್ತಿಗೆ ಸೀಮಿತವಾದುದಲ್ಲ. ಆದಕ್ಕೆ ವೈಜ್ಞಾನಿಕ ಆಯಾಮಗಳೂ ವೈಚಾರಿಕ ವ್ಯಾಖ್ಯಾನಗಳೂ ಇವೆ. ಪ್ರೇಮದ ಬಹುಮುಖಗಳನ್ನು, ಅಸಂಖ್ಯ ಸಾಧ್ಯತೆಗಳನ್ನು ಶೋಧಿಸುವ ಈ 'ಪ್ರೇಮ ಬರಹ', ಪ್ರೇಮದ ಕುರಿತ ನಾವು ಈವರೆಗೆ ನೆಚ್ಚಿಕೊಂಡು ಬಂದ ಸಂಗತಿಗಳನ್ನು ದೃಢಪಡಿಸುತ್ತದೆ, ಪ್ರೇಮದ ಕುರಿತ ಅಸ್ಪಷ್ಟ ಸಂಗತಿಗಳನ್ನು ನಿಚ್ಚಳಗೊಳಿಸುತ್ತದೆ ಹಾಗೂ ಹಲವು ಹೊಸ ಸಂಗತಿಗಳನ್ನು ಮನಗಾಣಿಸುತ್ತದೆ.

■ ಡಾ. ಪ್ರೇಮಲತ ಬಿ.

**ಫೆಬ್ರುವರಿ 14ರ 'ಪ್ರೇಮಿಗಳ ದಿನ'ದ ಸಂದರ್ಭದಲ್ಲಿ 'ಸುಧಾ' ಓದುಗರಿಗಾಗಿ ಪ್ರೇಮದ ಕುರಿತ ಟಿಪ್ಪಣಿಗಳು.**